ಸತ್ಯವಾದಿ
SATYAVADI

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಈ ಪತ್ರಿಕೆಗೆ
ದಾದಾರರಾಗಿರಿ
—
ಗೋರಕ್ಷಣೆ ನಡೆಯಲಿ

ಭಾ ಚುನಾವಣೆ

ನಾಗರೀಕರಿಗೆ ತಾವು ಸಲ್ಲಿಸಬೇಕಾದ
ಸೇವೆ ಏನು ? ಎಂಬುದನ್ನು ತಾವೇ ಸ್ವ
ತಃ ಪರಿಯಾಲೋಚಿಸಬೇಕು. ನಾಗ
ರೀಕರೂ ಸಹಾ ತಮ್ಮ ಮತ ಕೊಡುವಾ
ಗ ಯಾವುದೊಂದು ಸಂಸ್ಥೆಯೂ ವ್ಯ
ಕ್ತಿ ದಾಕ್ಷಿಣ್ಯಕ್ಕೆ ಒಳಗಾಗದೇ, ವೇ
ಯಂಶಗಳನ್ನು ಗಮನಕ್ಕೆ ತಂದು
ಂಡು ನಾಗರೀಕರ ಸೇವೆ ಮಾಡಲು
ಉರ್ಜಿತ ಮತ್ತು ಅಶಿ ಇರುವವರಿಗೆ ಮಾ
ತ್ರ ಮತ ಕೊಟ್ಟು ಆರಿಸುವುದು ನಾಗ
ರೀಕರ ಆದ್ಯ ಕರ್ತವ್ಯ.

ಕಾಂಗ್ರೆಸ್ ಸರಿವಾಗಿ ಇದು ವರೆಗೆ
ಹಲವಾರು ವರ್ಷಗಳಿಂದಲೂ ಸದಸ್ಯ
ರಾಗಿರುವವರು ಚುನಾವಣೆಗೆ ಉವೇ
ದ್ವಾರರಾಗಬಹುದು. ಕಾಂಗ್ರೆಸ್ ಸಂ
ಸ್ಥೆಯು ವಿಷಯದಲ್ಲಿ ನವುಗೆ ಗೌರವವೇ
ಇದೆ. ಯಾವ ತಾತ್ಸಾರವೂ ಇಲ್ಲ. ಆ
ದರೂ ಹಲವಾರು ವರ್ಷ ಸದಸ್ಯರಾಗಿ
ದ್ದು ಹೆಚ್ಚಿನ ಯಾವ ಸೇವೆಯನ್ನೂ ಮಾ
ಡದಿದ್ದವರನ್ನು ಪುನಃ ಉಮೇದವಾರ
ನ್ನಾಗಿ ಆರಿಸಕೂಡದೆಂದು ಅವರ ಪಾ
ರ್ಲಮೆಂಟರಿ ಬೋರ್ಡಿಗೆ ಸೂಚಿಸ ಬಯ
ಸುತ್ತೇವೆ.

ಇತರ ಉವೇದುವಾರರಾದರೂ
ತಾವು ಇದುವರೆವಿಗೆ ಏನೇನು ಸೇವೆ
ಮಾಡಿರುತ್ತೇವೆಂಬುದನ್ನು ತಮಗೆ ತಾ
ವೇ ಪ್ರಶ್ನಿಸಿಕೊಂಡು ನಂತರ ಅದನ್ನು
ಸಾರ್ವಜನಿಕರ ಮುಂದಿಟ್ಟು ಅವರ ತಿಳು
ವಳಿಕೆಗೆ ತರುವುದೂ ಸಹಾ ಅಗತ್ಯ. ಕಾಂ
ಗ್ರೆಸ್ ಅಥವಾ ಇತರ ಯಾವ ಉಮೇ

ಲ್ಲುವಂತಾ
ಸಂದರ್ಭದಲ್ಲಿ ಮಹ
ಅತಿ ಮಹತ್ವದ್ದು
ದಸ್ಯರಾಗಲಿಚ್ಚಿಸುವವ
ಾಯಿತರಾದರೆ ತನ್ನ
? ತನುಗೆ ಮತಕೊಟ್ಟು
ಗರಪಿತೃಗಳನ್ನಾಗಿ ಆರಿಸಿದ

ಮುಖಪುಟದಿಂದ |

ಧಾನ್ಯ ಲಾಭ, ಸಂ
ಕ್ಕೆ ಸ್ವಾತ್ಯರಾಗಬೇ

ರಾಗ್ಯ ಧನಧಾನ್ಯ ಲಾಭ
ಶ್ರವಣ
ಶ್ರೀ ಧನವ್ಯಯ ಯತ್ನ
ಜನ ದ್ವೇಷ, ಜನ

ರಾದರೂ ಯತ್ನ
ನ ಮೂಲಕ ಅಪ
ದರಿಯರ ಮೂಲ

ed and Published
ishna Rao, at the
adi Press, Chamrajpuram

ಗೋಡ್ಸೆ ಗಲ್ಲು ಸರಿ ಎಂದು ಪಂ. ನೆಹ್ರು ಹೇಳಿಕೆ

ನಾಥುರಾಂ ಗೋಡಸೆ ಮತ್ತು ನಾ
ರಾಯಣ ಆಪ್ಟೆ ಕ್ಷಮಾ ಅರ್ಜಿಯನ್ನು
ಗವರ್ನರ್ ಜನರಲ್ ತಿರಸ್ಕರಿಸಿದ ವಾರ್ತೆ
ದೆಹಲಿಯಿಂದ ಬಂದಿದೆ. 15 ನೆ ತಾ ||
ಅಂಬಾಲದಲ್ಲಿ ಅವರಿಬ್ಬರು ಗಲ್ಲಿಗೇರುವ
ರು. ಮಹಾನಾಯಕನನ್ನು ಕೊಂದ
ಪಾತಕನನ್ನು ಫಾಸಿಗೆ ಹಾಕಬಾರದೆಂಬ

ದುವಾರರೂ ಸಹಾ ಕೇವಲ ಸ್ಥಾನಗಳಿ
ಸುವುದಕ್ಕೆ ಮಾತ್ರ ಯತ್ನಿಸುವುದು ಧ
ರ್ಮವಲ್ಲ. ತಾನು ನಿಜವಾಗಿಯೂ
ನಾಗರೀಕರ ಸೇವೆಯನ್ನು ಕೈಗೊಳ್ಳುವೆ
ನೆಂದು ದೀಕ್ಷೆ ತೊಡವರು ಮಾತ್ರ
ಉಮೇದುವಾರರಾಗಿ ನಿಲ್ಲಬೇಕು.

ಓಟುಗಳನ್ನು ಕೇಳಲು ಬರುವ ಉ
ಮೇದುವಾರರಿಗೆ ನಾಗರೀಕರು ಈ ಕೆಳಗಿ
ನ ಕೆಲವು ಪ್ರಶ್ನೆಗಳನ್ನು ಕೇಳುವುದು ಉ
ಚಿತ :

ಈ ವರೆವಿಗೆ ನಾಗರಿಕರಿಗೆ ಸ್ವತಂತ್ರ
ವಾಗಿ ಏನೇನು ಸೇವೆ ಸಲ್ಲಿಸಿರುವಿರಿ ? ಈ
ಮೊದಲು ನಗರಸಭಾ ಸದಸ್ಯರಾಗಿದ್ದಿರಾ?
ಆಗ ನಿಮ್ಮ ಮೊಹಲ್ಲಾದವರಿಗಾದರೂ
ಏನಾದರೂ ಸೇವೆ ಸಲ್ಲಿಸಿರುವಿರಾ ? ಈ
ಗ ನಿಮ್ಮನ್ನು ಆರಿಸಿದರೆ ನೀವು ಮಾಡು
ವುದೇನು ? ಜನತಾ ಸೇವೆಗೆ ಪ್ರತಿಜ್ಞೆ

ಗಡ್ಡ ಬೋಳಿಸುವುದಿಲ್ಲ

ಗದಗ್, ನ 6 : ಕರ್ನಾಟಕ ಮಂ
ತ್ರಿಯಾಗುವವರಿಗೆ ಗಡ್ಡ ಬೋಳಿಸುವುದಿಲ್ಲ
ಎಂದು ಶ್ರೀ ಬಸರೀಗಿಡ ವೀರಪ್ಪನವರು
ಭೀಷ್ಮ ಪ್ರತಿಜ್ಞೆ ಮಾಡಿದ್ದಾರೆ.

ಮಾಡಲಿಲ್ಲವೇ ? ಕರ್ತವ್ಯಲೋಪ ಮಾಡಿ
ದರೆ ನೀವಾಗಿ ಆ ಕೂಡಲೇ ನಿಮ್ಮ ಸದ
ಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಲ್ಲಿರಾ ? ಈ ಬಗ್ಗೆ ನಿಮ್ಮ ಮೊಹಲ್ಲಾ ಜನ
ರಿಗಾದರೂ ಆಶ್ವಾಸನೆಯನ್ನು ಈಯಬ
ಲ್ಲಿರಾ ? ಎಂಬೀ ಪ್ರಶ್ನೆಗಳಿಗೆ ಸದುತ್ತರ
ವನ್ನಿತ್ತು ಭರವಸೆಯಿಟ್ಟಾಯುವ ಉಮೇ
ದುವಾರರಿಗೇನೆ ವಿಶೇಷ ಹಾಕತಕ್ಕದ್ದು.
ಇದರ ಏನಾ ಯಾವುದೊಂದು ಸಂಸ್ಥೆ
ಹೆಸರಿನಿಂದಾಗಲೀ ಅಥವಾ ಸ್ವತಂತ್ರವಾ
ಗಿಯೇ ಆಗಲೀ ಉಮೇದುವಾರರಿಗೆ
ದಾಕ್ಷಿಣ್ಯಕ್ಕೊಳಗಾಗಿ ಮತ ಕೊಡುವು
ದು ನ್ಯಾಯವಲ್ಲ.

ನಾಗರೀಕರು ಈ ಎಲ್ಲಾ ವಿಷಯಗ
ಳನ್ನೂ ಚೆನ್ನಾಗಿ ಯೋಚಿಸಿ ತಮ್ಮ ಕ
ರ್ತವ್ಯವನ್ನು ನೆರವೇರಿಸುವರೆಂದು ನಂ
ಬಿದ್ದೇವೆ,

'ಮುಲ್ಲ'

ಅಪೇರಾ ಟಾಕೀಸ್‌ನಲ್ಲಿ

ಶ್ಯಾಂಡ್ಸ್

ಅಮೋಘ 2 ನೇ ವಾರ

Doosri Shadi

ಮುಂತಾಜ್ ಶಾಂತಿ, ಕುಮಾರ್
ಪ್ರಮೀಳ, ಡೇವಿಡ್ ಪಾತ್ರವಹಿಸಿರುವ

ಸಂಪುಟ ೮ ಸಂಚಿಕೆ ೬ ಶಾ|| 7-11-1949

— ಪ್ರ ೮ ೀ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಹಿಂದೂ ಚಾತುರ್ವರ್ಣ್ಯದ ಸಾಮಾಸಿಕ ಧರ್ಮ

(ಮುಂದುವರಿದುದು)

ಸತ್ಯದಿಂದಲೇ ಗಾಳಿಯು ಬೀಸುವುದು. ಸತ್ಯದಿಂದಲೇ ಆಕಾಶದಲ್ಲಿ ಸೂರ್ಯನು ಬೆಳಗುವನು. ಸತ್ಯವೇ ವಾಗ್ವ್ಯವಹಾರಕ್ಕೆ ಆಧಾರವು. ಸತ್ಯದ ಆಶ್ರಯದಿಂದಲೇ ಸಕಲವೂ ನೆಲೆಸಿದೆ ಆದ್ದರಿಂದ ಸತ್ಯವೇ ಸರ್ವಶ್ರೇಷ್ಠ. ಸತ್ಯದ ಈ ಹೊಗಳಿಕೆಯಲ್ಲಿ ಲೇಶವೂ ಅತಿಶಯೋಕ್ತಿಯಿಲ್ಲ ವಿಶಿಷ್ಟ ಋತುವಿನಲ್ಲಿ ವಿಶಿಷ್ಟ ದಿಕ್ಕಿನಿಂದಲೇ ವಾಯುವು ಬೀಸುವುದೆಂಬುದು ಅನುಭವಸಿದ್ಧವಾಗಿದೆ. ನಗರದ ಹೊರಗೆ ಸೈನ್ಯ ನಿಲ್ದಾಣದಿಂದೇಳುವ ತಾಪದ ಶಬ್ದ ನಗರಕ್ಕೆ ಕೇಳಿಸುವುದು. ಇದು ವಾಯುವಿನ ಶಬ್ದವಾಹನ ವಿಷಯಕ ಸತ್ಯವಲ್ಲವೇನು? ಸೂರ್ಯನ ಅಸ್ತೋದಯ ಕಾಲವನ್ನಾಗಲಿ ಭವಿಷ್ಯದ ನೂರುವರ್ಷಗಳ ಗ್ರಹಣಗಳನ್ನಾಗಲಿ ಜ್ಯೋತಿಷಿಗಳು ತಿಳಿಸಬಲ್ಲರು. ಇದು ಸೂರ್ಯನಲ್ಲಿರುವ ಸತ್ಯದ ಆಧಾರದ ಮೇಲೆಯೇ ಸರಿ. ಚಂದ್ರನ ಕ್ಷಯವೃದ್ಧಿ, ಸಮುದ್ರದ ಏರಿಳಿತ, ಋತುಗಳ ಪರಿವರ್ತನ — ಇವೆಲ್ಲವೂ ನಿಯಮಿತವಾಗಿ ನಡೆಯುತ್ತವೆ. ಇದು ಸತ್ಯದ ಸತ್ತೆಯೇ ಆಗಿದೆ. ಅಗ್ನಿಯ ಪಾಚಕತ್ವವೂ ಜಲದ ನಿಮ್ನ ಸ್ರವಣತ್ವವೂ ಸತ್ಯದ್ದೇ ಸ್ಥೂಲ ರೂಪಗಳು. ಚೂರನು ನುಡಿದ ಕವಾಯಿವನು ಕುಡಿಯುವುದರಿಂದ ಇಂದಿಗೂ ರೋಗಮುಕ್ತರಾಗುವರು. ಇದಕ್ಕೂ ಕಾರಣ ಶುಂಠಿ-ಜೀರಿಗೆ ಮುಂತಾದ ಪದಾರ್ಥಗಳು ಇಂದಿನಿತ್ಯ ಇದರ ಪ್ರದರ್ಶನ ನಡೆಯುವುದು. ವ್ಯವಹಾರದಲ್ಲಿಯೂ ಇದೇ ಕಂಡು ಬರುತ್ತದೆ. ಅಬಲೆಯೊಬ್ಬಳು ತನ್ನ ತಂದೆ, ಸೋದರ ಗುರು ಇಲ್ಲವೆ ಬೇರೊಬ್ಬರ ಹತ್ತಿರ ವಿಶ್ವಾಸದಿಂದ ತನ್ನ ಯಾವುದೋ ಒಂದು ಒಡವೆಯನ್ನು ಇಡಲಿಕ್ಕೆ ಕೊಡುವಳು. ಆದರೆ ಕೆಲಕಾಲದ ಬಳಿಕ ಅದನ್ನು ಮರಳಿ ಕೇಳಲು ಬಂದಾಗ 'ಭೋಜನಂ ಮಮ ಚೀರ್ಯತಾಂ' ಕೇಳಬೇಕಾಗಿ ಬಂದರೆ, ಇದು ಸತ್ಯದ ಅಕ್ಷಮ್ಯವಾದ ಅವಜ್ಞೆಯೇ ಸರಿ. ಸ್ವಾರ್ಥಾಂಧತೆಯಿಂದ ಸತ್ಯವನ್ನು ರೀತಿ ಕಡೆಗಣಿಸುವುದೆಂದರೆ ಮನುಷ್ಯನು ಧರ್ಮದಿಂದ ಪತಿತನಾದಂತೆ. ಮನುಷ ಮಾತ್ರರಲ್ಲಿ ಒಂದು ನೇಳೆ ಸತ್ಯವು ನಿಶ್ಚಲವಾಗಿರುತ್ತಿದ್ದರೆ ಬೀಗ-ಬಾಗಿಲುಗಳಾಗಲಿ ಕಾವಲು ಸಿಪಾಯಿಗಳಾಗಲಿ ಯಾವುದೂ ಬೇಕಿರಲಿಲ್ಲ. ಮತ್ತು ಇವುಗಳಿಗಾಗಿ ತಗಲುವ ವೆಚ್ಚವು ಯಾವುದಾದರೂ ಸತ್ಕಾರ್ಯದಲ್ಲಿ ಆಗುತ್ತಿದ್ದಿತು. ಅಲ್ಲದೆ ಧನವನ್ನು ರಕ್ಷಿಸುವ ಉದ್ದಿಶ್ಯ ನಿದ್ದೆಯೂ ಯಾರಿಗೂ ಕೆಡುತ್ತಿರಲಿಲ್ಲ ಸತ್ಯದಲ್ಲಿ ಅನಾಸ್ಥೆಯೇ ಮಾನವ ಜಾತಿಯ ದುಃಖ ದಾರಿದ್ರ್ಯಗಳಿಗೆ ಮೂಲವಾಗಿರುವುದು.

ಇಂದೀಗ ಬ್ರಾಹ್ಮಣಾದಿ ಶ್ರೇಷ್ಠ ವರ್ಣದವರೂ ಸಹ ನ್ಯಾಯಾಲಯಗಳಲ್ಲಿ ನಿಃಶಂಕೆಯಿಂದ ಅಸತ್ಯವನ್ನು ನುಡಿಯುತ್ತಿರುವರು. ಇದನ್ನು ನೋಡಿ ಸಖೇದ ಆಶ್ಚರ್ಯವಾಗುವುದು. ಮನುವು ನ್ಯಾಯಾಲಯಗಳಲ್ಲಿ ಚಾತುರ್ವರ್ಣ್ಯದವರಿಗೆ ಹೇಳಿದ ಶಪಥವು ತಿಳಿದುಕೊಳ್ಳಲು

ಶ್ಲೋ ಪಾರ್ಥಿವಂ
ಸೈರ್ವೈಶ್ಯಂ, ಶೂದ್ರಂ ಸರ್ವೈಸ್ತು
ತಕ್ಕೈಃ ॥ ಸಾಕ್ಷಿಯು ಬ್ರಾಹ್ಮಣನಾದರೆ ಆವನನ್ನು ಕುರಿತು ಕೇವಲ 'ಹೇಳು' ಎಂದು ಮಾತ್ರ ನುಡಿಯಬೇಕು. ಕ್ಷತ್ರಿಯನಾದರೆ 'ಸತ್ಯವನ್ನು ಹೇಳು' ಎಂದು ಹೇಳತಕ್ಕದ್ದು, ವೈಶ್ಯನಾದಲ್ಲಿ ಅವನನ್ನು ಗದರಿಸಿ ನೀನು ಅಸತ್ಯ ಹೇಳಿದೆಯಾದರೆ ಹಸು-ಬೀಜ-ಬಂಗಾರಗಳನ್ನು ಅಪಹರಿಸಿದ ಪಾಪವು ನಿನ್ನ ತಲೆ ಮೇಲೆ ಬೀಳುವುದೆಂದು ಹೇಳಬೇಕು. ಸಾಕ್ಷಿಯು ಶೂದ್ರನಾದರೆ ಅಸತ್ಯ ನುಡಿದಲ್ಲಿ ಇಡೀ ಲೋಕದ ಪಾಪಗಳು ನಿನ್ನ ತಲೆ ಬೀಳುವುದೆಂದು ಅವನಿಗೆ ಎಚ್ಚರಿಕೆ ಕೊಡಬೇಕು

ಇದರಿಂದ ಪೂರ್ವ ಕಾಲದಲ್ಲಿ ಬ್ರಾಹ್ಮಣರಿಗೆ ಕೇವಲ 'ಹೇಳು' ಎನ್ನುವಷ್ಟು ಸಾಕಾಗಿದ್ದಿತೆಂದು ಸ್ಪಷ್ಟವಾಗುವುದು ಕಾರಣ ಬ್ರಾಹ್ಮಣರು ಸತ್ಯಭಾಷಿಗಳಾಗಿರುತ್ತಿದ್ದರಾದ್ದರಿಂದ ಅವರಿಗೆ ಸತ್ಯವನ್ನು ನೆನಪಿಸುವ ಅಗತ್ಯವಿರಲಿಲ್ಲ. ಆದರೆ ಇಂದು ಅದೇ ಬ್ರಾಹ್ಮಣರು 'ನಾನು ದೇವರಾಣೆಯಾಗಿ ಸತ್ಯವನ್ನೇ ಹೇಳುವೆನು, ಅಸತ್ಯ ನುಡಿಯುವುದಿಲ್ಲ' ಎಂದು ಶಪಥ ಮಾಡಿಯೂ ನಿರ್ಭಯವಾಗಿ ಸುಳ್ಳು ಸಾಕ್ಷಿ ಹೇಳುವುದು ಕಂಡು ಬರುತ್ತದೆ ಎಲ್ಲಕ್ಕಿಂತ ಶ್ರೇಷ್ಠ ವರ್ಣದ ಅವಸ್ಥೆ ಹೀಗಿರುವಾಗ ಇತರರ ವಿಷಯ ಕೇಳುವುದೇನು? ಯಾವ ಸಮಾಜವು ಸತ್ಯದಿಂದಿಷ್ಟು ಪತಿತವಾಗಿರುವುದೊ ಅದರ ಮೇಲೆ ವಿಪತ್ತುಗಳು ಕವಿಯದೆ ಏನಾಗಬೇಕು? ಸತ್ಯದ ವಿಧಾನವು ಎಂದಾದರೂ ಅಳಿಯಬಲ್ಲುದೇನು?

— ಅಸ್ತೇಯ —

ಅಸ್ತೇಯವೆಂದರೆ ಕಳ್ಳತನ ಮಾಡದಿರುವುದು — ಯಾರ ಯಾವುದೇ ವಸ್ತುವನ್ನೂ ಕದ್ದಾಗಲಿ ಸೆಳೆದಾಗಲಿ ತೆಗೆದುಕೊಳ್ಳದಿರುವುದು. ಕೊಳ್ಳುವ ಇಚ್ಛೆಯನ್ನು ಸಹ ಮಾಡದಿರುವುದು, ತನ್ನ ಸ್ವತ್ವಕ್ಕಿಂತ ಹೆಚ್ಚಿನದನ್ನು ಇಚ್ಛಿಸುವುದೇ ಚೌರನ ಮುಖ್ಯ ಲಕ್ಷಣ.

'ಯಾವತ್ ಆಭ್ರೀಯತೇ ದೇಹಃ
ತಾವತ್ ಸ್ವತ್ವಂ ಹಿ ಜೀವಿನಃ | ತತೋಧಿಕಂ ಯೋಲಸ್ಪೇತ, ಸ್ತೇನೋ ದಂಡಮರ್ಹತಿ ॥'

ಎಷ್ಟರಿಂದ ದೇಹದ ಭರಣಪೋಷಣ

ಮೂಲ ಬ್ರಾಹ್ಮಣ ಸ
ದ್ದ ಶ್ರೀ ಜಗದ್ಗುರುಗ
ತೆಯಲ್ಲಿ ಇಲ್ಲಿ ಸೇರುವುದ
ಪ್ರಾಂತಿಗೆ ಶ್ರೀ ಜಗ
ನೇ ಶನಿವಾರ ತಿಳುವರು

ಈ ವಾರದ ಭವಿ

ಓಂ ಜೋತಿ

ಮೇಷ— ದೇಹಾರೋ
ಭಂಗ ವಿತ್ತರ ವಿಶ್ವಾಸ.

ವೃಷಭ— ಶತ್ರುಜಯ
ಕಾರ್ಯಗಳಿಗೆ ಧನ
ರೊಂದಿಗೆ ಸಮಾಗಮ

ಮಿಥುನ— ನಿಷ್ಠಾ
ಯಾದಿಗಳೊಂದಿಗೆ
ಸ್ತ್ರೀಯರಿಂದ ಸ

ಕರ್ಕಾಟಕ —
ವಿನೋದ ಗೋಷ್ಠಿ,
ಚಿಂತೆ, ರಾಜಕಾರ್ಯದ

ಸಿಂಹ — ಯತ್ನ
ಸಫಲತೆ ಹಿತಶತ್ರುವೃದ್ಧಿ —
ಮನೋಚಿಂತೆ ಧನವ್ಯಯ

ಕನ್ಯಾ— ದಾಂಪತ್ಯಾದಿ
ಷ, ಅಪ್ರಯತ್ನ ಪ್ರಯಾಣ, ಶತ್ರು
ವ್ಯವಹಾರದಲ್ಲಿ ಆತಂಕಗಳು

ತುಲಾ— ಸುಖಾನುಭವಕ್ಕೆ
ಶವಿದ್ದರೂ ಚಿಂತೆ, ವಸ್ತ್ರಭೂಷಣ
ಮಿತ್ರರು ಶತ್ರುಗಳಾಗುವರು

ವೃಶ್ಚಿಕ— ರಾಜಕಾರ್ಯದಲ್ಲಿ
ಚಿಂತೆ, ಧನವ್ಯಯ, ವಿಶ್ರಾ
ಇಲ್ಲ ಭೋಜನ